# ನಗ್ನ ಸೌಂದರ್ಯ



ಕಲೆಗೆ ನೂರೆಂಟು ಮಾಧ್ಯಮಗಳು. ಅದರಲ್ಲಿ ಮನುಷ್ಯ ದೇಹವೂ ಒಂದು. ಲಾಸ್ ಏಂಜಲೀಸ್ ಮೂಲದ ಯುವ ಕಲಾವಿದೆ ಸಿಸಿಲಿಯಾ ವೆಬ್ಬರ್, ನಗ್ನದೇಹಗಳ ಫೋಟೋ ತೆಗೆದು, ಬಳಿಕ ಅವುಗಳನ್ನು ಕಂಪ್ಯೂಟರ್‌ನಲ್ಲಿ ತಿದ್ದಿ ತೀಡಿ ರೂಪಿಸುತ್ತಿರುವ ಕಲಾಕೃತಿಗಳು ಕಲಾಜಗತ್ತಿನಲ್ಲಿ ಸಾಕಷ್ಟು ಸುದ್ದಿ ಮಾಡುತ್ತಿವೆ. ಮಧು ಹೀರುವ ಚಿಟ್ಟೆಗಳು, ಅರಳಿ ನಿಂತ ಸುಂದರ ಹೂವುಗಳು – ಎಲ್ಲವೂ ಈಕೆಯ ಕೈಚಳಕದಲ್ಲಿ ಹೊಸ ಹೊಳಪುಗಳನ್ನು ಮೂಡಿಸುತ್ತಿವೆ.

ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾದ ಪದವೀಧರೆ ಸಿಸಿಲಿಯಾ ಮೂರು ವರ್ಷಗಳ ಹಿಂದೆ ದಿನವಿಡೀ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದಳು. ಫೋಟೋಗ್ರಫಿ ಆಕೆಯ ಬಿಡುವಿನ ವೇಳೆಯ ಹವ್ಯಾಸ. 'ಒಂದು ದಿನ ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ತೆಗೆದ ನಗ್ನಚಿತ್ರವೊಂದು ಅನಿರೀಕ್ಷಿತವಾಗಿ ಹೂವಿನ ದಳದಂತೆ ಕಾಣಿಸಿತು. ಇದೇ ಮಾದರಿಯನ್ನು ಕಲೆಯಲ್ಲಿ ಏಕೆ ಅನುಸರಿಸಬಾರದು ಎಂದುಕೊಂಡೆ. ಹಾಗೆಯೇ ಮುಂದುವರಿದೆ' ಎನ್ನುತ್ತಾಳೆ ಸಿಸಿಲಿಯಾ. ಕಂಪ್ಯೂಟರ್‌ನಲ್ಲಿ ಫೋಟೋಶಾಪ್ ಎಕ್ಸ್‌ಪರ್ಟ್ ಆಗಿದ್ದ ಸಿಸಿಲಿಯಾ ನೂರಾರು ಮಾನವ ಚಿತ್ರಗಳನ್ನು ಸೇರಿಸಿ, ಹೂವು, ದುಂಬಿಗಳನ್ನು ರೂಪಿಸಲು ತೊಡಗಿದಳು. ಕಾಲುಗಳು ದಳಗಳಾದರೆ, ಕೈಗಳು ಪುಷ್ಪಕೇಸರಗಳಾದವು.

ಹಾಗೆಂದು ಇದು ಸುಲಭದ ಕಲೆಯೇನಲ್ಲ. ಸೃಜನಶೀಲ ಸೆಲೆಯೂ ಬಲವಾಗಿರಬೇಕು. ಜತೆಗೆ ಇಂತಹ ಚಿತ್ರ ರಚನೆಗೆ ಮುಂಚೆಯೇ ಯಾವ ದೇಹ ಭಂಗಿಗಳು ಎಲ್ಲೆಲ್ಲಿ ಬರಬೇಕು ಎಂಬ ಬಗ್ಗೆ ಸ್ಪಷ್ಟ ರೂಪುರೇಖೆ ಹಾಗೂ ಕ್ರಮಬದ್ಧವಾದ ಯೋಜನೆಯನ್ನು ಸಿದ್ಧಗೊಳಿಸಬೇಕು. ಚಿತ್ರಕ್ಕೆ ಒಂದು ನಿಖರ ರೂಪು ನೀಡಲು ಕೆಲವೊಮ್ಮೆ ಒಂದೇ ಭಂಗಿಯ 50ಕ್ಕೂ ಹೆಚ್ಚು ಫೋಟೋಗಳನ್ನು ಈಕೆ ತೆಗೆಯಬೇಕಾಗುತ್ತಿತ್ತಂತೆ. ನಂತರ ಕಷ್ಟಪಟ್ಟು ಡಿಜಿಟಲ್ ಕಟ್ಟಿಂಗ್, ರೊಟೇಟಿಂಗ್, ಕಲರಿಂಗ್ ಮಾಡುವುದು. ಕೊನೆಗೆ ನಗ್ನ ದೇಹಗಳನ್ನು ಸಂಕೀರ್ಣ ಹೂ, ಚಿಟ್ಟೆ ಹಾಗೂ ಪಕ್ಷಿಗಳನ್ನಾಗಿ ಪರಿವರ್ತನೆಗೊಳಿಸುವುದು.

ಸಿಸಿಲಿಯಾ ತಾನು ಬಯಸಿದ ಪರಿಣಾಮ ಪಡೆಯಲು 700ಕ್ಕೂ ಹೆಚ್ಚು ಬಿಂಬಗಳನ್ನು ಪದರುಗಳನ್ನಾಗಿ ಪೇರಿಸಿದ್ದಾಳೆ. ಒಂದು ಚಿತ್ರವನ್ನು ಮಾಡಿ ಮುಗಿಸಲು ಎರಡು ತಿಂಗಳಿಗಿಂತಲೂ ಹೆಚ್ಚು ಕಾಲ ಕೆಲಸ ನಿರ್ವಹಿಸಿದ್ದಾಳೆ. ಈಕೆ ಪಟ್ಟ ಶ್ರಮದ ಫಲಿತಾಂಶವು ಅದ್ಭುತ ಚಿತ್ರಗಳಾಗಿ ಹೊರಹೊಮ್ಮಿದೆ.

ಈಗಾಗಲೇ ಫ್ಲವರ್ ಸೀರೀಸ್, ಬಟರ್‌ಫ್ಲೈಸ್ ಸೀರೀಸ್ ಹಾಗೂ ಬರ್ಡ್ ಸೀರೀಸ್‌ಗಳ ಚಿತ್ರಗಳನ್ನು ಬಿಡುಗಡೆ ಮಾಡಿರುವ ಸಿಸಿಲಿಯಾಗೆ ಮುಂದೆ ಸಮುದ್ರ ಜೀವಿಗಳ ಸರಣಿಯನ್ನು ಮಾಡುವ ಯೋಜನೆಯಿದೆ. ಈಗಾಗಲೇ ವ್ಯಾನಿಟಿ ಫೇರ್(ಇಟಲಿ), ಎಲ್ಲೆ (ಮೆಕ್ಸಿಕೊ), ಡುಝು (ಚೀನಾ), ಏಂಜಲಿನೊ (ಲಾಸ್ ಏಂಜಲೀಸ್), ಬೆಟರ್ ಫೋಟೋಗ್ರಫಿ (ಇಂಡಿಯಾ), ರೆಸಿಡೆನ್ಸ್ (ಸ್ವೀಡನ್), ಡಿಸೈನ್ ಬೂಮ್ (ಇಂಟರ್‌ನ್ಯಾಶನಲ್ ಆನ್‌ಲೈನ್) ಮುಂತಾದ ಮ್ಯಾಗಸಿನ್‌ಗಳಲ್ಲಿ ಈ ಚಿತ್ರಗಳು ಪ್ರಕಟಗೊಂಡಿವೆ. 'ಪ್ರಕೃತಿಯೊಡನೆ ಬೆಸೆದಿರುವ ಕೊಂಡಿಯನ್ನು ಜನರು ಅರಿತುಕೊಳ್ಳಲು ಹಾಗೂ ತಮ್ಮ ದೇಹಗಳ ಬಗ್ಗೆ ಸಕಾರಾತ್ಮಕ ನಿಲುವನ್ನು ಇಟ್ಟುಕೊಳ್ಳಲು ಈ ಮಾಧ್ಯಮ ಬಳಸುತ್ತಿದ್ದೇನೆ' ಎನ್ನುವ ಸಿಸಿಲಿಯಾ, 'ಜನರು ಮುಚ್ಚುಮರೆಯಿಲ್ಲದೆ ಹಿತಕರವಾದ ಸೌಂದರ್ಯ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು' ಎನ್ನುತ್ತಾಳೆ.



■ ವಿದ್ಯಾ ವಿ ಹಾಲಭಾವಿ